ಓ ಎಸ್ ನಂಃ 132-17
ಪಿ ಡಬ್ಲ್ಯೂ ಃ 2

ದಿಃ 01-04-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ವಿ ಎಸ್ ವಕೀಲರಿಂದ

5. ಈ ದಾವೆಯನ್ನು ಚಂದ್ರಮೌಳೇಶ್ವರ ರವರು ಹೂಡಿರುತ್ತಾರೆ. ನಾನು ಮತ್ತು ವಾದಿ ಒಂದೇ ಊರಿನವರು ಆಗಿರುತ್ತೇವೆ. ನಾನು ಹಾಗೂ ವಾದಿ ಆತ್ಮೀಯರು ಎಂದರೆ ನಿಜ. ನಾನು ವಾದಿಗೆ ಸಹಾಯ ಮಾಡುತ್ತೇನೆ ಹಾಗೂ ವಾದಿ ನನಗೆ ಸಹಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಸಹಿ ಮಾಡುತ್ತೇನೆ. ಈ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆ. ಕಡೆಯ ಬಾರಿ ನ್ಯಾಯಾಲಯಕ್ಕೆ ಬಂದಾಗ ಈ ದಿನಾಂಕದಂದು ಬರಬೇಕೆಂದು ತಾರೀಖು ಕೊಟ್ಟಿದ್ದರಿಂದ ನಾನು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನನ್ನನ್ನು ಈ ದಿನ ವಾದಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನಮ್ಮ ಊರಿನ ಪಕ್ಕದ ಊರಿನವರಾಗಿದ್ದು ನನಗೆ ಅವರ ಪರಿಚಯ ಇರುವುದಿಲ್ಲ. ನನಗೆ 2 ಮತ್ತು 3ನೇ ಪ್ರತಿವಾದಿಗಳ ಸ್ವಲ್ಪ ಪರಿಚಯ ಇರುತ್ತದೆ. ನನಗೆ 1ನೇ ಪ್ರತಿವಾದಿಯ ಗಂಡನ ಹೆಸರು ಗೊತ್ತಿಲ್ಲ. ನನಗೆ 1ನೇ ಪ್ರತಿವಾದಿ ಹಾಗೂ ಅವರ ಕುಟುಂಬದವರಿಗೆ ಎಷ್ಟು ಆಸ್ತಿಗಳು ಇರುತ್ತವೆ ಗೊತ್ತಿಲ್ಲ. 1ನೇ ಪ್ರತಿವಾದಿಗೆ ಇಬ್ಬರು ಮಕ್ಕಳು ಇರುತ್ತಾರೆ. 1ನೇ ಪ್ರತಿವಾದಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಅದರ ಬಗ್ಗೆ ನಾನು ತಿಳಿದುಕೊಂಡಿಲ್ಲ ಎಂದು ಹೇಳುತ್ತಾರೆ.

6. ನಾನು, ವಾದಿ ಹಾಗೂ ಇನ್ನೊಬ್ಬರು ದಾವಾ ಆಸ್ತಿಯ ವ್ಯಾಪಾರಕ್ಕೆ ಹೋಗಿರುತ್ತೇವೆ. ನಾವು 2012ರಲ್ಲಿ ವ್ಯಾಪಾರಕ್ಕೆಂದು ಹೋಗಿದ್ದು ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ವ್ಯಾಪಾರಕ್ಕೆಂದು ನಾವೇ ಹೋಗಿರುತ್ತೇವೆ ಎಂದರೆ ಜಮೀನನ್ನು ಕೊಡುವುದಾಗಿ ಪ್ರತಿವಾದಿಗಳು ಹೇಳಿದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಯ ಖರೀದಿ ಮಾತುಕತೆ 1ನೇ ಪ್ರತಿವಾದಿಯ ಮನೆಯ ಒಳಗಡೆ ಆಗಿರುತ್ತದೆ. ಮಾತುಕತೆಯಾದ ನಂತರ ಸ್ಥಳದಲ್ಲಿ ಬರವಣಿಗೆ ಆಗಿರುವುದಿಲ್ಲ. ಮಾತುಕತೆಯಾದ ನಂತರ ಮರುದಿನ ಕ್ರಯದ ಕರಾರು ಪತ್ರದ ಬರವಣಿಗೆ ಆಗಿರುತ್ತದೆ. ಮರುದಿನ ಕ್ರಯದ ಕರಾರು ಪತ್ರದ ಬರವಣಿಗೆ ಆಗಿ ಅದೇ ದಿನ ನೊಂದಣಿಯಾಗಿರುತ್ತದೆ. ಕ್ರಯದ ಕರಾರುರ ಪತ್ರದ ಬರವಣಿಗೆ ಮಾಗಡಿಯ ಕಲ್ಯಾಗೇಟ್ ಬಳಿ ಸ್ಟಾಂಪ್ ವೆಂಡರ್ ರವರ ಕಡೆಯಾಗಿರುತ್ತದೆ. ಆ ಸ್ಟಾಂಪ್ ವೆಂಡರ್ ರವರ ಹೆಸರು ಹರೀಶ್ ಆಗಿರುತ್ತದೆ. ದಾವಾ ಆಸ್ತಿಯ ಕ್ರಯದ ಮಾತುಕತೆ 6 ಲಕ್ಷ ರೂಗಳಿಗೆ ಆಗಿರುತ್ತದೆ. ಮಾತುಕತೆ ಸಮಯದಲ್ಲಿ ದಾವಾ ಆಸ್ತಿಯ ಬೆಲೆ 10 ಲಕ್ಷಕ್ಕಿಂತ ಹೆಚ್ಚಿಗೆ ಇತ್ತು ಎಂದರೆ ಸರಿಯಲ್ಲ. ನಿಪಿ9ರಲ್ಲಿ ಏನು

ಬರೆಯಲಾಗಿದೆ ಗೊತ್ತಿದೆ. ನಿಪಿ 9 ರಲ್ಲಿ ಒಂದು ವೇಳೆ ಪ್ರತಿವಾದಿಗಳು ನಿಗಧಿತ ಸಮಯದಲ್ಲಿ ಕ್ರಯಪತ್ರವನ್ನು ಬರೆದುಕೊಡದೇ ಇರುವ ಸಂದರ್ಭದಲ್ಲಿ ಮುಂಗಡ ಹಣದ 2 ರಷ್ಟು ಹೆಚ್ಚಿಗೆ ಹಣವನ್ನು ಕೊಡಬೇಕಾಗುತ್ತದೆಂದು ಬರೆಯಲಾಗಿದೆಯೇ ಎಂದರೆ ಇಲ್ಲ. ಒಂದು ವೇಳೆ 24 ತಿಂಗಳ ಒಳಗೆ ವಾದಿ ಉಳಿಕೆ ಹಣವನ್ನು ಕೊಟ್ಟು ಕ್ರಯಪತ್ರವನ್ನು ಬರೆಸಿಕೊಳ್ಳದೇ ಇದ್ದರೆ ಮುಂಗಡ ಹಣವನ್ನು ಪ್ರತಿವಾದಿಗಳು ಮುಟ್ಟುಗೋಲು ಹಾಕಿಕೊಳ್ಳಬಹುದು ಮತ್ತು ದಾವಾ ಆಸ್ತಿಯನ್ನು ಇಷ್ಟಾನುಸಾರ ಬೇರೆಯವರಿಗೆ ಮಾರಾಟ ಮಾಡಬಹುದು ಎಂಬುದಾಗಿ ನಿಪಿ9 ರಲ್ಲಿ ಬರೆಯಲಾಗಿದೆಯೇ ಎಂದರೆ ಇಲ್ಲ. ಮೇಲೆ ಹೇಳಿದ ಎರಡು ಕರಾರು ಬಗ್ಗೆ ಮಾತುಕತೆ ಆಗಿರುವುದಿಲ್ಲ. ಪ್ರತಿವಾದಿಗಳು ಎಲ್ಲಾ ದಾಖಲೆಗಳನ್ನು ಒದಗಿಸಿ ಕ್ರಯಪತ್ರವನ್ನು ಬರೆದುಕೊಡುವುದಾಗಿ ಹೇಳಿದ್ದರಿಂದ ನಿಪಿ 9 ರ ಬದಲು ನೇರವಾಗಿ ಕ್ರಯಪತ್ರವನ್ನು ಬರೆಸಿಕೊಂಡಿರುವುದಿಲ್ಲ. ದಾವಾ ಆಸ್ತಿಯ ದಾಖಲೆಗಳನ್ನು ನಾನು ನೋಡಿಲ್ಲ ಅವುಗಳನ್ನು ವಾದಿ ನೋಡಿರುತ್ತಾರೆ. ಸಾಮಾನ್ಯವಾಗಿ ಪಹಣಿಯ ಆಸ್ತಿ ಒಬ್ಬರ ಹೆಸರಿನಲ್ಲಿ ಬರುತ್ತಿದ್ದರೆ ಅದರ ಆಧಾರದ ಮೇರೆಗೆ ಕ್ರಯಪತ್ರ ನೊಂದಣಿ ಮಾಡಿಸಿಕೊಳ್ಳಲು ತೊಂದರೆ ಇರುವುದಿಲ್ಲ ಎಂದರೆ ನಿಜ. ದಾವಾ ಆಸ್ತಿಯ ಸರ್ವೆ ನಂಬರ್ ನೆನಪಿಲ್ಲ. ನಿಪಿ 9 ಆಗುವಾಗ ದಾವಾ ಆಸ್ತಿಗಳ ಪಹಣಿಗಳು 1 ನೇ ಪ್ರತಿವಾದಿಯ ಹೆಸರಿಗೆ ಇದ್ದು ನೇರವಾಗಿ ಕ್ರಯಪತ್ರ ಆಗಲು ತೊಂದರೆ ಇರಲಿಲ್ಲ ಎಂದರೆ ಗೊತ್ತಿಲ್ಲ. ನಿಪಿ 9 ನ್ನು ಹೊರತುಪಡಿಸಿ ನಾನು ಬೇರೆ ದಾಖಲೆಗಳಿಗೆ ಸಹಿ ಮಾಡಿಲ್ಲ. 2017 ರಲ್ಲಿ ನಾನು ಒಂದು ಷರಾಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿ ಈಗ ನಿಪಿ 10 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನನ್ನ ತಂದೆಯ ಹೆಸರು ಗಿರಿಯಪ್ಪ ಆಗಿರುತ್ತದೆ. ನಿಪಿ 10 ರಲ್ಲಿ 2 ನೇ ಪುಟದ ನಿಡಿ1 ರ ಕೆಳಭಾಗದಲ್ಲಿರುವ ದೊಡ್ಡಗಿರಿಯಪ್ಪ ಎಂದರೆ ನನ್ನ ತಂದೆಯಾಗಿರುತ್ತಾರೆ ಎಂದರೆ ನಿಜ. ನಿಪಿ 9(ಸಿ) ಮತ್ತು ನಿಡಿ 1 ಬೇರೆ ಬೇರೆ ಇರುತ್ತದೆ ಎಂದರೆ ಹೆಸರು ಒಂದೇ ಇದ್ದು ಬರವಣಿಗೆಯಲ್ಲಿ ವ್ಯತ್ಯಾಸ ಇರುತ್ತದೆ ಎಂದು ಹೇಳುತ್ತಾರೆ. ನನ್ನ ಸಮಕ್ಷಮ ವಾದಿ ಹಣ ಕೊಟ್ಟಿರುತ್ತಾರೆ. ನಿಪಿ 9 ರಲ್ಲಿ ನನ್ನ ಸಮಕ್ಷಮ ಹಣವನ್ನು ಕೊಡಲಾಗಿದೆ ಎಂದು ಬರೆದಿರುವುದಿಲ್ಲ. 2 ನೇ ಪ್ರತಿವಾದಿ ನಮ್ಮ ಊರಿನಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. 2 ನೇ ಪ್ರತಿವಾದಿ ಸಾಲ ಬೇಕು ಎಂದು ವಾದಿಗೆ ಕೇಳಿದ್ದರು ಎಂದರೆ ಅವರು ಮಾತನಾಡಿಕೊಂಡಿರಬಹುದು ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ವಾದಿಯಿಂದ ಸಾಲವನ್ನು ಪಡೆದಿದ್ದು ಆ ಸಾಲದ ಭದ್ರತೆಗಾಗಿ ನಿಪಿ 9 ನ್ನು ವಾದಿಯ ಹೆಸರಿಗೆ ಬರೆದುಕೊಡಲಾಗಿದೆ ಎಂದರೆ ಅವರ ಮಧ್ಯೆ ಆಗಿರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ 9 ನ್ನು ವಾದಿಯ ಹೆಸರಿಗೆ ಸಾಲದ ಭದ್ರತೆಗಾಗಿ ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವಾ ಆಸ್ತಿಗಳ ಮೇಲೆ ಪೂರ್ತಿ ಹಕ್ಕು ಇರುವುದಿಲ್ಲ ಅವರಿಗೆ ದಾವಾ ಆಸ್ತಿಗಳನ್ನು ಕ್ರಯ ಮಾಡುವುದಿದ್ದರೆ ಅವರ ಕುಟುಂಬದ ಎಲ್ಲಾ ಸದಸ್ಯರು ಬಂದು ನಿಪಿ 9 ನ್ನು ಬರೆದುಕೊಡುತ್ತಿದ್ದರು

ಎಂದರೆ ಪ್ರತಿವಾದಿಗಳು ತಮಗೆ ದಾವಾ ಆಸ್ತಿಗಳ ಮೇಲೆ ಹಕ್ಕು ಇದೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿಗಳಿಗೆ ತಮ್ಮ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ನಿಜ. ನಿಪಿ 9 ಕ್ಕೆ ಸಹಿ ಪಡೆಯಲು ನನ್ನನ್ನು ವಾದಿ ಕರೆದುಕೊಂಡು ಹೋಗಿರುತ್ತಾರೆ. ನನ್ನನ್ನು ಹೊರತುಪಡಿಸಿ ನನ್ನ ಎದುರಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಅವರ ಹೆಸರು ಗೊತ್ತಿಲ್ಲ. ವಾದಿ ನಮ್ಮ ಊರಿನವರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿ ಸುಳ್ಳು ದಾವೆ ಹೂಡಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಹಾಗೆ ಯಾವುದೇ ಕ್ರಯದ ಕರಾರು ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 10 ನ್ನು ನಾನು ಹಾಗೂ ವಾದಿ ಸೇರಿ ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 10 ನ್ನು ಹರೀಶ್ ರವರು ಬರೆದಿರುತ್ತಾರೆ. ನಿಪಿ 10 ನ್ನು ಬರೆಯುವಾಗ ನಾನು ಸ್ಥಳದಲ್ಲಿದ್ದೆ ಅದನ್ನು ಹರೀಶಿ ರವರು ಬರೆದಿರುತ್ತಾರೆ. ನಿಪಿ 9 ನ್ನು ಬರೆದ ಹರೀಶ್ ರವರೇ ನಿಪಿ 10 ನ್ನು ಬರೆದಿರುತ್ತಾರೆ ಎಂದರೆ ಅವರೇ ಇರಬಹುದು ನನಗೆ ಸರಿಯಾಗಿ ನೆನಪಿಲ್ಲ ಎಂದು ಹೇಳುತ್ತಾರೆ. ನಿಪಿ 10 ನ್ನು ಹರೀಶ್ ರವರ ಕಛೇರಿಯಲ್ಲಿಯೇ ಬರೆಯಲಾಗಿದೆ . ನಿಪಿ 10 ನ್ನು ಬರೆಯಲು ಮಾಹಿತಿಯನ್ನು ವಾದಿ ಹಾಗೂ ಪ್ರತಿವಾದಿಗಳು ಕೊಟ್ಟಿರುತ್ತಾರೆ. ನಿಪಿ10 ನ್ನು ಬರೆಯಲು ಛಾಪಾ ಕಾಗದವನ್ನು 2 ನೇ ಪ್ರತಿವಾದಿ ತಂದಿರುತ್ತಾರೆ. ನಿಪಿ 10 ನ್ನು ಈ ದಾವೆಗಾಗಿ ನಾನು ಹಾಗೂ ವಾದಿ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**